ಈ) 2009–10ನೇ ಸಾಲಿಗೆ ಕರಡು ವಾರ್ಷಿಕ ಯೋಜನೆಯಲ್ಲಿ ರೂ.597.95 ಲಕ್ಷಗಳಲ್ಲಿ (ಆರ್.ಐ.ಡಿ.ಎಫ್–12ಕ್ಕೆ ರೂ.77.95ಲಕ್ಷ ಮತ್ತು ಆರ್.ಐ.ಡಿ.ಎಫ್–13ಕ್ಕೆ ರೂ.520.00 ಲಕ್ಷ) ಬೇಡಿಕೆಯನ್ನು ಜಿಲ್ಲಾ ಪಂಚಾಯತ್ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಆದರೆ 2009–10 ನೇ ಸಾಲಿಗೆ ರೂ.296.46 ಲಕ್ಷಗಳು ಮಾತ್ರ ಜಿಲ್ಲಾ ಲಿಂಕ್‌ಡಾಕ್ಯುಮೆಂಟ್‌ನಲ್ಲಿ ನಿಗದಿಯಾಗಿರುತ್ತದೆ. ರೂ.296.46 ಲಕ್ಷಗಳ ಪೈಕಿ ಆರ್.ಐ.ಡಿ.ಎಫ್–12ಕ್ಕೆ ರೂ.77.95 ಲಕ್ಷ ಮತ್ತು ಆರ್.ಐ.ಡಿ.ಎಫ್–13 ಕ್ಕೆ ರೂ.218.51 ಲಕ್ಷಗಳನ್ನು ಸಂಬಂಧಿಸಿದ ಜಿಲ್ಲೆಗೆ ಬಿಡುಗಡೆ ಮಾಡಲಾಗಿದೆ.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಮಹೇಶ್ ಎಸ್.ಆರ್. (ಕೃಷ್ಣರಾಜನಗರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 722 ಕ್ಕೆ ಅನುಬಂಧ

ಕ್ರ ಸಂ.	ತಾಲ್ಲೂಕು/ವಲಯ	ಸರ್ಕಾರಿ ಪ್ರೌಢ ಶಾಲೆಗಳ ಸಂಖ್ಯೆ	ಮಂಜೂರಾದ ಕೊಠಡಿಗಳ ಸಂಖ್ಯೆ	ಪ್ರಾಜೆಕ್ಟ್ ಕಾಸ್ಟ್	2009–10ನೇ ಸಾಲಿಗೆ ಬಿಡುಗಡೆಯಾದ ಅನುದಾನ
1	ಹೆಚ್.ಡಿ. ಕೋಟೆ	8	18	90.00	20.00
2	ಹುಣಸೂರು	7	28	140.00	40.00
3	ಕೆ.ಆರ್. ನಗರ	13	28	140.00	70.00
4	ಮೈಸೂರು	1	4	20.00	10.00
5	ನಂಜನಗೂಡು	2	8	40.00	20.00
6	ಪಿರಿಯಾಪಟ್ಟಣ	6	14	70.00	48.51
7	ಟಿ. ನರಸೀಪುರ	1	4	20.00	10.00
	ಒಟ್ಟು	**38**	**104**	**520.00**	**218.51**

798 ಶ್ರೀ ಶ್ರೀನಿವಾಸ್ ಎಂ (ಮಂಡ್ಯ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು (ವಿವರಗಳನ್ನು ನೀಡುವುದು);

ಆ) ಮಂಡ್ಯ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಪದವಿ ಪೂರ್ವ ಕಾಲೇಜುಗಳಿಗೆ ಸ್ವಂತ ಕಟ್ಟಡವಿಲ್ಲದೆ ಪ್ರೌಢಶಾಲೆಗಳ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು;

ಇ) ಈ ಪದವಿ ಪೂರ್ವ ಕಾಲೇಜುಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಎಂದು ನಿರ್ಮಿಸಲಾಗುವುದು;

ಈ) ಮಂಡ್ಯ ಕ್ಷೇತ್ರದ ಕಲ್ಲಹಳ್ಳಿ, ಹೊನ್ನಾಯಕನಹಳ್ಳಿ ಮತ್ತು ಹೊಡೆಘಟ್ಟ ಗ್ರಾಮಗಳಲ್ಲಿರುವ ಪ್ರೌಢಶಾಲೆಗಳಿಗೆ ಸ್ವಂತ ಕಟ್ಟಡಗಳಿಲ್ಲದೆ ಪ್ರಾಥಮಿಕ ಶಾಲೆಗಳಲ್ಲೇ ತರಗತಿಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಈ ಮೂರು ಪ್ರೌಢಶಾಲೆಗಳಿಗೆ ಎಂದು ಸ್ವಂತ ಕಟ್ಟಡಗಳನ್ನು ನಿರ್ಮಿಸಲಾಗುವುದು;

ಊ) ಮಂಡ್ಯ ನಗರದ ಪೊಲೀಸ್ ಕಾಲೋನಿ ಮತ್ತು ಕನ್ನಲಿ ಗ್ರಾಮಗಳಲ್ಲಿ ಪದವಿ ಪೂರ್ವ ಕಾಲೇಜುಗಳಿಗೆ ಸ್ವಂತ ಕಟ್ಟಡಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಋ) ಹಾಗಿದ್ದಲ್ಲಿ, ಈ ಎರಡೂ ಪದವಿ ಪೂರ್ವ ಕಾಲೇಜುಗಳಿಗೆ ಎಂದು ಸ್ವಂತ ಕಟ್ಟಡಗಳನ್ನು ನಿರ್ಮಿಸಲಾಗುವುದು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಮಂಡ್ಯ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 6 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿರುತ್ತವೆ. ಅವುಗಳು :

1. ಸ.ಪ.ಪೂ.ಕಾಲೇಜು ಕಲ್ಲು ಕಟ್ಟಡ ಮಂಡ್ಯ,
2. ಸ.(ಮಾ.ಪು) ಪ.ಪೂ.ಕಾಲೇಜು, ಮಂಡ್ಯ
3. ಸ.ಪ.ಪೂ.ಕಾಲೇಜು, ಅರ್ಕೇಶ್ವರ ನಗರ, ಮಂಡ್ಯ
4. ಸ.ಪ.ಪೂ.ಕಾಲೇಜು, ಬಸರಾಳು,
5. ಸ.ಪ.ಪೂ.ಕಾಲೇಜು, ಪೊಲೀಸ್ ಕಾಲೋನಿ, ಮಂಡ್ಯ,
6. ಸ.ಪ.ಪೂ.ಕಾಲೇಜು, ಕನ್ನಲಿ

ಆ) ಮೇಲಿನ ಎಲ್ಲಾ ಆರು ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ತರಗತಿಗಳು ಪ್ರೌಢಶಾಲಾ ಕಟ್ಟಡದಲ್ಲಿ ನಡೆಯುತ್ತಿವೆ.

ಇ) ಇದೆ. ಸ.ಪ.ಪೂ.ಕಾಲೇಜು ಕನ್ನಲಿಗೆ ಆರ್.ಐ.ಡಿ.ಎಫ್–14ರಡಿ 2 ಕೊಠಡಿಗಳ ನಿರ್ಮಾಣಕ್ಕೆ 15.94 ಲಕ್ಷ ರೂಗಳನ್ನು ಒದಗಿಸಲಾಗಿದೆ.

ಸ.(ಮಾ.ಪು)ಪ.ಪೂ.ಕಾಲೇಜು, ಮಂಡ್ಯ ಇಲ್ಲಿಗೆ ಕಟ್ಟಡ ನಿರ್ಮಾಣಕ್ಕಾಗಿ 50.00 ಲಕ್ಷರೂಗಳ ಅನುದಾನವನ್ನು ನೀಡಿ ಆಡಳಿತಾತ್ಮಕ ಅನುಮೋದನೆ ನೀಡಲು ಕ್ರಮವಹಿಸಲಾಗಿದೆ.

ಉಳಿದ ಕಾಲೇಜುಗಳಿಗೆ ಮುಂಬರುವ ವರ್ಷಗಳಲ್ಲಿ ಅನುದಾನದ ಲಭ್ಯತೆಯನ್ನು ಆಧರಿಸಿ ಕಟ್ಟಡಗಳನ್ನು ಒದಗಿಸಲು ಕ್ರಮ ವಹಿಸಲಾಗುವುದು.

ಈ) ಹೌದು ಗಮನಕ್ಕೆ ಬಂದಿದೆ.

ಉ) ಕಲ್ಲಹಳ್ಳಿ ಸರ್ಕಾರಿ ಪ್ರೌಢಶಾಲೆಗೆ ಆರ್.ಐ.ಡಿ.ಎಫ್.13 ರಡಿಯಲ್ಲಿ 4 ಕೊಠಡಿ ಹಾಗೂ ಹೊಡೆಘಟ್ಟ ಸರ್ಕಾರಿ ಪ್ರೌಢಶಾಲೆಗೆ ಆರ್.ಐ.ಡಿ.ಎಫ್. 15ರಡಿಯಲ್ಲಿ 5 ಕೊಠಡಿ ನಿರ್ಮಿಸಲು ನಬಾರ್ಡ್ ಅನುಮೋದನೆ ದೊರೆತಿದ್ದು, 2010–11ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಲಿಂಕ್ ಡಾಕ್ಯುಮೆಂಟ್‌ನಡಿ ನಿಗದಿಯಾಗುವ ಅನುದಾನದ ಲಭ್ಯತೆಯನ್ನಾಧರಿಸಿ ಕೊಠಡಿ ನಿರ್ಮಾಣ ಮಾಡಲು ಕ್ರಮ ವಹಿಸಲಾಗುವುದು.

ಹೊನ್ನಾಯಕನಹಳ್ಳಿ ಸರ್ಕಾರಿ ಪ್ರೌಢಶಾಲೆಗೆ ಇತರೆ ಯೋಜನೆಯಡಿಯಲ್ಲಿ ಅನುದಾನ ಒದಗಿಸಲಾಗುವುದು.

ಊ) ಬಂದಿದೆ.

ಋ) ಸ.ಪ.ಪೂ.ಕಾಲೇಜು ಕನ್ನಲಿಗೆ ಆರ್.ಐ.ಡಿ.ಎಫ್–14ರಡಿ 2 ಕೊಠಡಿಗಳ ನಿರ್ಮಾಣಕ್ಕೆ 15.94 ಲಕ್ಷ ರೂಗಳನ್ನು ಒದಗಿಸಲಾಗಿದೆ.

ಉಳಿದ ಕಾಲೇಜಿಗೆ ಅನುದಾನ ಲಭ್ಯತೆಯನ್ನು ಆಧರಿಸಿ ಹಂತ ಹಂತವಾಗಿ ಕಟ್ಟಡಗಳನ್ನು ನಿರ್ಮಿಸಲು ಕ್ರಮ ವಹಿಸಲಾಗುವುದು.

621 ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಥಿಲಾವಸ್ಥೆಯಲ್ಲಿರುವ ಪ್ರಾಥಮಿಕ ಮತ್ತು ಪ್ರೌಢಶಾಲಾ ಕೊಠಡಿಗಳನ್ನು ದುರಸ್ತಿಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಶಿಥಿಲಾವಸ್ಥೆಯಲ್ಲಿರುವ ಶಾಲಾ ಕೊಠಡಿಗಳ ಸಂಖ್ಯೆ ಎಷ್ಟು; ಅವು ಯಾವುವು;

ಇ) ಮಕ್ಕಳ ಹಿತದೃಷ್ಟಿಯಿಂದ ಶಾಲಾ ಕೊಠಡಿಗಳ ದುರಸ್ತಿಯನ್ನು ಅವಶ್ಯಕತೆ ಹೆಚ್ಚಾಗಿದ್ದು, ಇದಕ್ಕೆ ವಿಶೇಷ ಅನುದಾನದಡಿ ಕ್ರಮ ಕೈಗೊಳ್ಳಲಾಗುವುದೇ?